## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.

**ಓ.ಎಸ್. ನಂಃ81/2020 ಡಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **08.01.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ **ಜಿ.ಜಿ.ಎಸ್** ವಕೀಲರಿಂದಃ

ನಾನು **6** ನೇ ಪ್ರತಿವಾದಿ ಮಗ ಎಂದರೆ ಸರಿ. ನಾನು **6** ನೇ ಪ್ರತಿವಾದಿಯ ಪರವಾಗಿ ಅಧಿಕಾರ ಪತ್ರವನ್ನು ಹೊಂದಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. **2003** ರಲ್ಲಿ ನನಗೆ **29** ವರ್ಷ ವಯಸ್ಸಾಗಿತ್ತು. ನನ್ನ ತಂದೆ **6** ನೇ ಪ್ರತಿವಾದಿ ಮಾಡಿದ ವ್ಯವಹಾರಗಳ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಬಿ.ಎಸ್ಸಿ ಪದವೀದರ.

ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರವು ಆಂಗ್ಲ ಭಾಷೆಯಲ್ಲಿ ಇರುತ್ತದೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ, ಸಾಕ್ಷಿ ಮುಂದುವರಿದು ನಾನು ಕನ್ನಡ ಭಾಷೆಯಲ್ಲಿ ತಿಳಿಸಿದ್ದು, ಅದನ್ನು ಆಂಗ್ಲ ಭಾಷೆಯಲ್ಲಿ ಬರೆಸಿರುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿರುತ್ತವೆ.

ಈ ಪ್ರಕರಣದ ವಾದಿಯು ನನಗೆ ಪರಿಚಯ ಇರುವುದಿಲ್ಲ. ವಾದಿಯ ತಂದೆಯ ಹೆಸರು ಕಪ್ಪನಯ್ಯ ಅಲಿಯಾಸ್ ಕಪ್ಪನಪ್ಪ ಎಂದು ಇರುತ್ತದೆ. ಕಪ್ಪನಯ್ಯರವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ತಿಳಿದಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಕಪ್ಪನಯ್ಯರವರಿಗೆ ಇಬ್ಬರು ಹೆಂಡತಿಯರು ಇದ್ದು, ಮೊದಲನೇ ಹೆಂಡತಿಯ ಹೆಸರು ಪಾರ್ವತಮ್ಮ ಎಂದು ಇರುತ್ತದೆ, ಸದರಿಯವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದು, ಸದರಿಯವರ ಹೆಸರು ನಾಗಮ್ಮ ಎಂದು ಇರುತ್ತದೆ, ಮತ್ತೊಬ್ಬರ ಹೆಸರು ನನಗೆ ಗೊತ್ತಿರುವುದಿಲ್ಲ, ಕಪ್ಪನಯ್ಯರವರ ಎರಡನೇ ಹೆಂಡತಿಯ ಹೆಸರು ಮಲ್ಲಮ್ಮ ಎಂದು ಇರುತ್ತದೆ, ಸದರಿಯವರಿಗೆ ಒಬ್ಬ ಗಂಡು ಮಗ ಹಾಗೂ ಮೂರು ಜನ ಹೆಣ್ಣು ಮಕ್ಕಳು ಇದ್ದು, ಸದರಿಯವರ ಹೆಸರು ಕಮಲಮ್ಮ ಅಂದರೆ ಈ ದಾವೆಯ ವಾದಿ, ನೀಲಮ್ಮ ಮತ್ತು

ಶಂಕರಮ್ಮ ಎಂದು ಇರುತ್ತದೆ, ಗಂಡು ಮಗನ ಹೆಸರು ಮಲ್ಲಪ್ಪ ಎಂದು ಇರುತ್ತದೆ. ನೀಲಮ್ಮರವರು ಈಗ ಜೀವಂತ ಇರುವುದಿಲ್ಲ.

ವಾದಿಯು ಸಲ್ಲಿಸಿರುವ ದಾವೆಯ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಈ ದಾವೆಯ ಷೆಡ್ಯೂಲನಲ್ಲಿ ಇರುವ ಆಸ್ತಿಗಳು ಕಪ್ಪನಯ್ಯರವರ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿ. ಕಪ್ಪನಯ್ಯರವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ಆಸ್ತಿಗಳ ಯಾವುದೇ ವಿಭಾಗವನ್ನು ಮಾಡಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕಪ್ಪನಯ್ಯರವರು ನಾವು ಕ್ರಯಕ್ಕೆ ತೆಗೆದುಕೊಂಡ ಜಮೀನಿನ ಪಕ್ಕದಲ್ಲಿ 20 ಗುಂಟೆ ಜಮೀನನ್ನು ತುರುಗುನೂರು ಗ್ರಾಮದ ಶಂಕರೇಗೌಡರವರಿಗೆ ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಗಳು ಕಪ್ಪನಯ್ಯರವರ ಜೀವಿತಾವಧಿಯಲ್ಲಿ ಅವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯು ತಮ್ಮ ವಾದಪತ್ರದಲ್ಲಿ ಸಲ್ಲಿಸಿರುವ ವಂಶವೃಕ್ಷ ಸರಿ ಇರುತ್ತದೆ ಎಂದರೆ ಸಾಕ್ಷಿಯು ನೋಡಿರುವುದಿಲ್ಲ ಹಾಗೂ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂ.160 ರಲ್ಲಿ ಒಟ್ಟು 2 ಎಕರೆ ವಿಸ್ತೀರ್ಣ ಹಾಗೂ ಅದರೊಂದಿಗೆ ಖರಾಬು ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನು ಮೆಣಸಿಕ್ಯಾತನಹಳ್ಳಿ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ವಾದಿಯು ಕಪ್ಪನಯ್ಯರವರ ಹಿರಿಯ ಮಗಳು ಎಂದರೆ ಸರಿ. ನನ್ನ ತಂದೆಯವರು ದಾವಾ-1 ಮತ್ತು 2 ನೇ ಆಸ್ತಿಯನ್ನು ಕಪ್ಪನಯ್ಯರವರ ಮಗ ಅಂದರೆ ಈ ದಾವೆಯ 2 ರಿಂದ 5 ನೇ ಪ್ರತಿವಾದಿಗಳ ತಂದೆ ಮಲ್ಲಪ್ಪರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಕಪ್ಪನಯ್ಯರವರ ಇತರೆ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಮಲ್ಲಪ್ಪರವರು ದಿನಾಂಕ 11.03.2003, 30.06.2003, 22.11.2003 ರಂದು ತಮ್ಮ ತಂದೆ ಕಪ್ಪನಯ್ಯರವರ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ 30.06.2003 ರಂದು ನಮಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸರ್ವೇ ನಂ.160 ರಲ್ಲಿ ಕಪ್ಪನಯ್ಯರವರ ಹೆಸರಿಗೆ ಈಗಲೂ ಸಹ 1 ಎಕರೆ ಬಾಬ್ತು ಪಹಣಿ ಪತ್ರಿಕೆ ನಮೂದು ಇರುತ್ತದೆ ಎಂದರೆ ಸರಿ. ನನ್ನ ತಂದೆ ಮಲ್ಲಪ್ಪರವರಿಂದ ಖರೀದಿ ಮಾಡಿದ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಮಲ್ಲಪ್ಪರವರು ಕಪ್ಪನಯ್ಯರವರ ಹೆಸರಿನಲ್ಲಿ ಇದ್ದ ಜಮೀನನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡು ನನ್ನ ತಂದೆಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಮಲ್ಲಪ್ಪರವರ ಹೆಸರಿಗೆ ವರ್ಗಾವಣೆ ಆಗುವ ಮುನ್ನ ಕಪ್ಪನಯ್ಯರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಕಪ್ಪನಯ್ಯರವರು ತೀರಿಕೊಂಡ ನಂತರ ಮಲ್ಲಪ್ಪರವರು ಸದರಿ ಆಸ್ತಿಯ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಒಟ್ಟು ಕುಟುಂಬದ ಆಸ್ತಿಗಳನ್ನು ಮಲ್ಲಪ್ಪರವರು ಖಾತೆ ಮಾಡಿಸಿಕೊಂಡಿದ್ದು, ಅದರಲ್ಲಿ ನಾವು ಸ್ವಲ್ಪ ಆಸ್ತಿಯನ್ನು ನಾವು ಖರೀದಿ ಮಾಡಿರುತ್ತೇವೆ ಎಂದರೆ ಸರಿ.

ಪಿತ್ರಾರ್ಜಿತ ಆಸ್ತಿಯಲ್ಲಿ ವಾದಿಗೆ ಸಹ ಭಾಗಂಶದ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಆ ರೀತಿ ಕಾನೂನು ಇರಲಿಲ್ಲ ಎಂದು ನುಡಿಯುತ್ತಾರೆ. ಕಪ್ಪನಯ್ಯರವರು 2001 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸದರಿಯವರು ತೀರಿ ಹೋದ ವರ್ಷ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಕಪ್ಪನಯ್ಯರವರಿಗೆ ಮಲ್ಲಪ್ಪ ಹೊರತುಪಡಿಸಿ ಬೇರೆ ಮಕ್ಕಳು ಇರುವ ವಿಚಾರ ನನಗೆ ತಿಳಿದಿತ್ತು. ವಾದಿಯು ಈ ದಾವೆಯನ್ನು ಹಾಕುವ ಮುನ್ನ ದಾವಾ- 1 ಮತ್ತು 2 ನೇ ಆಸ್ತಿಯಲ್ಲಿ ತಮಗೂ ಭಾಗಂಶದ ಹಕ್ಕು ಇರುತ್ತದೆ ಎಂದು ನನ್ನ ತಂದೆಗೆ ಮೌಖಿಕವಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಮಲ್ಲಪ್ಪರವರ ಹೆಸರಿನಲ್ಲಿ ಖಾತೆ ಇರುವ ಕಾರಣ ಮೇರೆಗೆ ದಾವಾ-1 ಮತ್ತು 2 ನೇ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ದಾವಾ-1 ಮತ್ತು 2 ನೇ ಆಸ್ತಿಯನ್ನು ಖರೀದಿ ಮಾಡುವ ಮುನ್ನ ಅದರ ಪೂರ್ವಪರವನ್ನು ತಿಳಿದುಕೊಂಡಿದ್ದೆನು. ಸರ್ವೇ ನಂ.160 ರ ಆಸ್ತಿಯನ್ನು ನನ್ನ ತಂದೆಯವರು ಕ್ರಯಕ್ಕೆ ಪಡೆದ ನಂತರ ಹಲವಾರು ಪೋಡ ಆಗಿರುತ್ತವೆ ಎಂದರೆ ಸರಿ. ನಾವು ಖರೀದಿ ಮಾಡಿದ ಆಸ್ತಿಯ ಸರ್ವೇ ನಂ.ಪ್ರಸ್ತುತ 160/13 ಎಂದು ಇರುತ್ತದೆ. ಕೆಲವು ಪಹಣಿ ಪತ್ರಿಕೆಗಳಲ್ಲಿ ಸದರಿ ಸರ್ವೇ ನಂ.160/3 ಎಂದು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾವು ಅಕ್ರಮವಾಗಿ ಕ್ರಯಕ್ಕೆ

ಪಡೆದಿರುವ ದಾವಾ-1 ಮತ್ತು 2 ನೇ ಆಸ್ತಿಯು ವಾದಿಯ ಬಾದ್ಯಸ್ಥವಾಗಲ್ಲ ಎಂದರೆ ಸರಿಯಲ್ಲ. ಈ ಆಸ್ತಿಯ ಬಗ್ಗೆ ವಾದಿಯು ನಮ್ಮೊಂದಿಗೆ ವಿಚಾರ ಮಾಡಿದ್ದು, ಅದರ ಬಾಬ್ತು ನಾವು ಗಲಾಟೆ ಮಾಡಿರುವ ಕಾರಣ ವಾದಿಯು ನಮ್ಮ ವಿರುದ್ಧ ಬನ್ನೂರು ಪೊಲೀಸ ಠಾಣಯಲ್ಲಿ ದೂರು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ದಾವಾ-1 ಮತ್ತು 2 ನೇ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದು ಗೊತ್ತಿದ್ದರೂ ಸಹ ನಾವು ಅಕ್ರಮವಾಗಿ ಮಲ್ಲಪ್ಪರವರಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ವಾದಿಗೆ 1/3 ಭಾಗಂಶದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**